

# ಬ.ಬ.ಗಂ...

ನನ್ನವಳಿಗೆ ಒಂದು ಚೂರೂ ಸುಳಿವು ಸಿಗದೇ ಇರೋ ಹಾಗೆ ಒಬ್ಬ ಬರಹಗಾರ್ತಿಯ ಗಂಡನಾಗಿ ನನ್ನ ಪಡಿಪಾಟಲುಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ದಯವಿಟ್ಟು ಈ ಗುಟ್ಟನ್ನು ನಿಮ್ಮ ಹೊಟ್ಟೆಯೊಳಗೇ ಇರಿಸಿಕೊಳ್ಳಿ.

■ ಸವಿತಾ ಮಾಧವ ಶಾಸ್ತ್ರಿ ಗುಂಡ್ಮಿ

ನಾನು ಯಾರು ಅಂತ ನಿಮಗೆ ಗೊತ್ತಿಲ್ಲ ಅಲ್ಲವಾ? ಇವನ್ಯಾರಪ್ಪ ಬ.ಬ.ಗಂ! ಏನಿದು ಬ.ಬ.ಗಂ? ಕನ್ನಡ ಪದವೋ ಸಂಸ್ಕೃತ ಪದವೋ ಅಂತ ನೀವು ಗೂಗಲ್‌ನಲ್ಲಿ ಅರ್ಥ ಹುಡುಕಲು ಹೋಗುವ ಮುಂಚೆ ನಾನು ಯಾರೆಂದು ಹೇಳಿಬಿಡುತ್ತೇನೆ! ನೀವೆಲ್ಲ ಹೊಗಳಿ ಅಟ್ಟಕ್ಕೇರಿಸಿದ್ದೀರಲ್ಲ, ಬರಹಗಾರ್ತಿ – ನಾನು ಆ ಬರಹಗಾರ್ತಿಯ ಬಡಪಾಯಿ ಗಂಡ ಕಣ್ರೀ. ಶಾರ್ಟಾಗಿ ಹೇಳೋದಾದರೆ, 'ಬ.ಬ.ಗಂ.'

ನನ್ನವಳಿಗೆ ಒಂದು ಚೂರೂ ಸುಳಿವು ಸಿಗದೇ ಇರೋ ಹಾಗೆ ಒಬ್ಬ ಬರಹಗಾರ್ತಿಯ ಗಂಡನಾಗಿ ನನ್ನ ಪಡಿಪಾಟಲುಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ. ದಯವಿಟ್ಟು ಈ ಗುಟ್ಟನ್ನು ನಿಮ್ಮ ಹೊಟ್ಟೆಯೊಳಗೆ ಮಡುಗಿಟ್ಟುಕೊಳ್ಳಿಯಪ್ಪಾ. ಅಪ್ಪಿ ತಪ್ಪಿ ಇದು ನನ್ನವಳಿಗೆ ತಿಳಿದರೆ ನನ್ನ ಹೊಟ್ಟೆ ಮೇಲೆ ತಣ್ಣೀರಬಟ್ಟೆಯೇ ಗತಿಯಾದೀತು!

ಮದುವೆಗೆ ಮುಂಚೆ ಇವಳು ಕಥೆ–ಗಿಥೆ ಬರೆಯೋ ವಿಷಯ ನನಗೆ ಗೊತ್ತೇ ಇರಲಿಲ್ಲ. ಮದುವೆಯ ನಂತರ ಶುರುವಾಯಿತು ನೋಡಿ ಕಾಟ! ಒಂದು ದಿನ 'ರೀ, ಒಂದಷ್ಟು ಕವರ್ ತೊಗೊಂಡು ಬನ್ನಿ' ಎಂದಳು. ನಾನು ಯಾವುದಕ್ಕೆ ಅಂತ ಕೂಡ ಕೇಳದೆ ಬೆಪ್ಪುತಕ್ಕಡಿಯ ಹಾಗೆ ಮದುವೆ ಮುಂಜಿಗೆ ಉಡುಗೊರೆ ಕೊಡಲಿಕ್ಕೆ ಉಪಯೋಗಿಸ್ತಾರಲ್ಲ, ಆ ರೀತಿಯ ಕವರ್ ತೊಗೊಂಡು ಬಂದೆ. ಅವನ್ನು ನೋಡಿದವಳೇ ಹಣೆಹಣೆ ಚಚ್ಚಿಕೊಳ್ಳುತ್ತಾ 'ಅಯ್ಯೋ ಇದಲ್ಲಾರೀ, ನಾನು ಬರೆದಿರೋ ಕಥೆ ಪೋಸ್ಟ್ ಮಾಡೋಕೆ ಉದ್ದುದ್ದ ಕವರ್' ಎಂದು ತಾನು ಕಥೆ ಬರೆಯೋ ವಿಷಯ ಹೇಳಿದಳು. ನನಗೆ ಒಳಗೊಳಗೆ ಪುಕು ಪುಕು! ಏನಾದ್ರೂ ಇವಳ ಸುದ್ದಿಗೆ ಹೋದರೆ ಕೋಪಗೊಂಡು ನನ್ನ ಮೇಲೇ ಕಥೆ ಬರೆದುಬಿಟ್ಟರೆ?

ಅವತ್ತಿನಿಂದ ಇವಳು ಬರೆದದ್ದನ್ನು ಪೋಸ್ಟ್ ಆಫೀಸಿಗೆ ಹೋಗಿ ತೂಕ ಮಾಡಿಸಿ, ಸ್ಟಾಂಪ್ ಹಚ್ಚಿ ಪೋಸ್ಟ್ ಮಾಡೋದು ನನ್ನ ಡ್ಯೂಟಿ ಆಯ್ತು. ಒಮ್ಮೆ ಯಾವುದೋ ಸ್ಪರ್ಧೆಗೆಂದು ಕಥೆ ಬರೆದು ಪೋಸ್ಟ್ ಮಾಡಲು ಕೊಟ್ಟಿದ್ದಳು. ನಾನು ಯಾವುದೋ ಆಲೋಚನೆಯಲ್ಲಿ ತೂಕ ಮಾಡಿಸದೆ ಹಾಗೆಯೇ ಸ್ಟಾಂಪ್ ಅಂಟಿಸಿ ಪೋಸ್ಟ್ ಮಾಡಿದೆ. ಸ್ವಲ್ಪ ದಿನಗಳಲ್ಲಿ ಪೋಸ್ಟ್ ವಾಪಸ್ ಬಂತು. ಪೋಸ್ಟ್ ಆಫೀಸ್‌ನವರು ಫೈನ್ ಹಾಕಿದ್ದರು. ಏಕೆಂದರೆ, ನಾನು ಹಚ್ಚಿದ ಸ್ಟಾಂಪ್ ತೂಕಕ್ಕಿಂತ ಕಡಿಮೆ ಇತ್ತು. ಇವಳಿಂದ ಸಹಸ್ರ ನಾಮಾರ್ಚನೆ. 'ಏನ್, ತನ್ನ ಕಥೆಗೇ ಮೊದಲ ಬಹುಮಾನ ಬಂದುಬಿಡ್ತಿತ್ತು ಅನ್ನೋ ಥರ ಇವಳು ಆಡೋದು ನೋಡು' ಅಂತ ಮನಸ್ಸಿನಲ್ಲೇ ಬಯ್ದುಕೊಂಡೆ.

ಈಗ ಐದಾರು ವರ್ಷಗಳಿಂದೀಚೆಗೆ ಇ–ಮೇಲ್ ಬಂದ ಮೇಲೆ ಈ ಪೋಸ್ಟ್ ಮಾಡೋ ತಾಪತ್ರಯ ತಪ್ಪಿತು. ಆದರೆ ನನಗೆ ಅದಕ್ಕಿಂತ ಭಯಂಕರ ಡ್ಯೂಟಿ ವಹಿಸಿದಳು. ಏನು ಗೊತ್ತಾ? ಇವಳು ಬರೆದದ್ದನ್ನು ಚಾಚೂ ತಪ್ಪದೆ ನಾನು ಓದಬೇಕು. ಎಲ್ಲೆಲ್ಲಿ ಅಕ್ಷರದೋಷಗಳಿವೆ ಅಂತೆಲ್ಲ ಹುಡುಕಿ ತಿದ್ದಲು ಹೇಳಬೇಕು. ಆನಂತರ ಕಥೆ ಹೇಗಿದೆ ಅಂತ ಹೇಳಬೇಕು. 'ಚೆನ್ನಾಗಿದೆ ಕಣೇ' ಅಂದರೆ ಮಹರಾಯ್ತಿ ಸುಮ್ಮನಿರ್ತಾಳಾ? 'ಅದೇನ್ರೀ ಅದು, ಏನು ಓದೋಕೆ ಕೊಟ್ಟರೂ ಒಳ್ಳೆ ಕೋಲೆಬಸವನಂತೆ ತಲೆ ಆಡಿಸಿ ಚೆನ್ನಾಗಿದೆ ಅಂತ ಹೇಳಿಬಿಡ್ತೀರಿ. ಸರಿಯಾಗಿ ವಿಮರ್ಶೆ ಮಾಡಬೇಕಪ್ಪಾ...' ಎಂದು ಮೂತಿ ಊದಿಸಿಕೊಳ್ಳುತ್ತಾಳೆ.

ಇವಳು ಬರೆದದ್ದು ಪತ್ರಿಕೆಗಳಲ್ಲಿ ಪ್ರಕಟವಾದರೆ ಅವತ್ತು ಖುಷಿಯಿಂದ ಬೇಕು ಬೇಕಾದ ಅಡುಗೆಗಳನ್ನೆಲ್ಲ ತಯಾರಿಸಿ ನನ್ನ ಹೊಟ್ಟೆ ಬಿರಿಯೋ ಅಷ್ಟು ಊಟ ಬಡಿಸುತ್ತಾಳೆ. ಅಪ್ಪಿತಪ್ಪಿ ಸಂಪಾದಕರು 'ನಿಮ್ಮ ಬರಹ ಅಸ್ವೀಕೃತವಾಗಿದೆ' ಎಂದು ಒಂದು ಸಾಲು ಮೇಲ್ ಮಾಡಿದರೆ ಮುಗೀತು, ಅವತ್ತು ನಾನು ಮನೆಗೆ ಬರುತ್ತಲೇ ಅಮ್ಮಾವರು ಸುರುಸುರು ಎಂದು ಕಣ್ಣುಮೂಗು ಒರೆಸಿಕೊಳ್ಳುತ್ತಾ, 'ನೋಡ್ರೀ, ನಾನು ಅಷ್ಟು ಕಷ್ಟಪಟ್ಟು ಎಷ್ಟೊಂದು ಚೆನ್ನಾಗಿ ಬರೆದು ಕಳಿಸಿದ್ದೆ. ಸಂಪಾದಕರು ತಿರಸ್ಕರಿಸಿಬಿಟ್ಟರು. ನನಗೆ ತುಂಬಾ ಬೇಜಾರಾಯಿತು ಕಣ್ರೀ. ಯಾವ ಕೆಲಸ ಮಾಡೋಕೂ ಮನಸ್ಸೇ ಬರಲಿಲ್ಲ. ಅಡುಗೇನೂ ಮಾಡಿಲ್ಲ. ಪಕ್ಕದ ಬೀದಿಯಲ್ಲಿ ಒಂದು ಹೊಸ ರೆಸ್ಟೋರೆಂಟ್ ಶುರುವಾಗಿದೆಯಲ್ಲ. ಏನಾದ್ರೂ ತಿಂಡಿ ಪಾರ್ಸೆಲ್ ಕಟ್ಟಿಸಿಕೊಂಡು ಬನ್ರಿ' ಎಂದು ರಾಗವಾಗಿ ಹೇಳುತ್ತಾಳೆ. 'ಬಿತ್ತಲ್ಲಪ್ಪ ಜೇಬಿಗೆ ಕತ್ತರಿ' ಎಂದು ನಾನು ಒಳಗೊಳಗೆ ಸಂಕಟಪಡುತ್ತಾ, 'ನೀನು ಯಾವುದಾದರೂ ಪತ್ರಿಕೆಯ ಸಂಪಾದಕರನ್ನೇ ಮದುವೆಯಾಗಬೇಕಿತ್ತು ಕಣೇ...' ಎಂದು ಇವಳ ಕಾಲೆಳೆದರೆ, 'ಥೂ ಹೋಗ್ರೀ, ನನ್ನಂಥಾ ಫೇಮಸ್ ರೈಟರ್(?) ಗಂಡ ಆಗಿರೋದು ನಿಮ್ಮ ಪುಣ್ಯ ಅಂದುಕೊಳ್ಳಿ' ಎಂದು ಜಂಬ ಕೊಚ್ಚಿಕೊಳ್ಳುತ್ತಾಳೆ.

ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಒಂದು ವಾರ ಕಳೆದ ಮೇಲೆ ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡೋದನ್ನು ನನ್ನವಳು ತಪ್ಪಿಸಿದ್ದಿಲ್ಲ. ಒಲೆಯ ಮುಂದೆ ಹಾಲು ಕಾಯಿಸುತ್ತಲೋ ಪಲ್ಯ ಮಾಡುತ್ತಲೋ – ತನ್ನ ಬರಹಕ್ಕೆ ಎಷ್ಟು ಲೈಕ್ ಬಂತು, ಯಾರು ಏನು ಕಮೆಂಟ್ ಹಾಕಿದರು ಎಂದು ನೋಡುವ ಭರದಲ್ಲಿ ಎಷ್ಟೋ ಸಲ ಪಲ್ಯ ಸೀದು ಹೋಗಿದೆ; ಹಾಲು ಉಕ್ಕಿ, ದೋಸೆ ಕರಟಿ ಹೋಗಿರುವುದೂ ಇದೆ. ಕರಟಲು ದೋಸೆಯನ್ನೇ ತಿನ್ನುವ ಭಾಗ್ಯ ಈ ಬರಹಗಾರ್ತಿಯ ಬಡಪಾಯಿ ಗಂಡನಿಗಲ್ಲದೆ ಇನ್ನಾರಿಗೆ ಸಿಗಲು ಸಾಧ್ಯ?

ಹೇಳೋಕೆ ಇನ್ನೂ ಎಷ್ಟೆಲ್ಲ ವಿಷಯಗಳಿವೆ. ಆದ್ರೆ ಇರಿ, ಅವಳು ಬಂದುಬಿಟ್ಳು ಅನಿಸತ್ತೆ... ನಾನಿದನ್ನೆಲ್ಲ ನಿಮ್ಮೆದುರಿಗೆ ಹೇಳ್ತಿರೋದು ಗೊತ್ತಾದ್ರೆ ಅಷ್ಟೆ...

ಪ್ರತಿಕ್ರಿಯಿಸಿ: feedback@sudha.co.in